ದಿನಾಂಕ 21-09-2023 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿಯರ ಪರ ಶ್ರೀ.ಆರ್ ಯು ಪಿ ವಕೀಲರಿಂದ :

**5.** ರಿ.ಸ.ನಂ. **83/1** ರಲ್ಲಿ ನನ್ನ ಹಿಸ್ಸೆಯ **1** ಎಕರೆ **20** ಗುಂಟೆಯನ್ನು ಮಾರಾಟ ಮಾಡಿದ್ದೇನೆ. ರಿ.ಸ.ನಂ. **136** ರಲ್ಲಯೂ ಸಹ **20** ಗುಂಟೆಯನ್ನು ಮಾರಾಟ ಮಾಡಿದ್ದೇನೆ ಎಂದರೆ ಇಬ್ಬರೂ ಕೂಡಿಯೇ ಮಾರಾಟ ಮಾಡಿದ್ದೇನೆ. ಇಬ್ಬರು ಕೂಡಿ ಮಾರಾಟ ಮಾಡಿದ್ದೀರಿ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಇಬ್ಬರೂ ಕೂಡಿ ಮಾರಾಟ ಮಾಡಿದ್ದಲ್ಲಿ ಆ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಹಾಜರುಪಡಿಸುತ್ತೇನೆ. ಸದರಿ ಜಮೀನುಗಳನ್ನು **2016** ರಲ್ಲಿ ಮಾರಾಟ ಮಾಡಿದ್ದೇನೆ. ಮೇಲೆ ಹೇಳಿದ ಜಮೀನುಗಳನ್ನು ಮಾರಾಟ ಮಾಡುವ ಎರಡು ತಿಂಗಳ ಪೂರ್ವದಲ್ಲಿಯೇ ನಾನು ಬೇರೆ ಜಮೀನು ಖರೀದಿಸಿದ್ದೆ. ಕಲಗುಡ್ಡಿ

ಗ್ರಾಮದ ರಿ.ಸ.ನಂ. 13/11 ರಲ್ಲಿ 1 ಎಕರೆಯನ್ನು 2016 ರಲ್ಲಿ ಖರೀದಿಸಿದ್ದೇನೆ ಎಂದರೆ ಸರಿ. 2018 ರಲ್ಲಿ ನನ್ನ ಪತ್ನಿಯ ಹೆಸರಿನಲ್ಲಿ ಅದೇ ಗ್ರಾಮದ ರಿ.ಸ.ನಂ. 10/5 ರಲ್ಲಿ 1 ಎಕರೆ ಖರೀದಿಸಿದ್ದೇನೆ ನನ್ನ ಮಾವ ನನ್ನ ಹೆಂಡತಿಗೆ ಖರೀದಿಸಿ ಕೊಟ್ಟಿದ್ದಾರೆ. 2016 ರಲ್ಲಿ ರಿ.ಸ.ನಂ. 13/8 ರಲ್ಲಿ 32 ಗುಂಟೆಯನ್ನು ನನ್ನ ಹೆಸರಿನಲ್ಲಿ ಖರೀದಿಸಿದ್ದೇನೆ ಎಂದರೆ ನನ್ನ ಮಾವ ನನ್ನ ಹೆಸರಿನಲ್ಲಿ ಖರೀದಿಸಿ ಕೊಟ್ಟಿದ್ದಾರೆ. ನನ್ನ ಮಾವ ಹಣ ಕೊಟ್ಟು ನನ್ನ ಮತ್ತು ನನ್ನ ಪತ್ನಿಯ ಹೆಸರಿನಲ್ಲಿ ಆಸ್ತಿ ಖರೀದಿಸಿಕೊಟ್ಟಿದ್ದಾರೆ ಎಂಬ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಅಂತಹ ಯಾವುದೇ ದಾಖಲೆಗಳು ಇಲ್ಲದೇ ಇರುವುದರಿಂದ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

6. ದಾವಾ ಆಸ್ತಿಗಳು1 ನೇ ಪ್ರತಿವಾದಿಯ ವಾರಸುದಾರರ ಹೆಸರಿನಲ್ಲಿ ದಾಖಲಾಗಿವೆ ಎಂದರೆ ಸರಿ. ಯಾವ ಇಸವಿಯಿಂದ ದಾಖಲಾಗಿವೆ ಎಂದರೆ ಇತ್ತಿತ್ತಲಾಗಿ ಅವರ ಮಕ್ಕಳು ಮಾಡಿಕೊಂಡಿದ್ದಾರೆ. ಅವರ ಹೆಸರಿನಲ್ಲಿ ವಾರಸಾ ನಾತೆಯಿಂದ ದಾಖಲಾದ ಬಗ್ಗೆ ನಾನು ಎಲ್ಲಿಯೂ ಪ್ರಶ್ನಿಸಿಲ್ಲ. ಸಾಕ್ಷಿ ಮುಂದುವರೆದು ನಮಗೆ ಹಿಸ್ಸೆ ಕೊಟ್ಟರುವುದರಿಂದ ಪ್ರಶ್ನೆ ಮಾಡಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಬಗ್ಗೆ ನಮ್ಮ ಮತ್ತು ಪ್ರತಿವಾದಿಯರ ಮಧ್ಯ 4-5 ವರ್ಷಗಳ ಹಿಂದೆ ತಂಟೆ ತಕರಾರು ಬಂತು. ಆ ಸಮಯದಲ್ಲಿ ನಾನು ದಾವೆ ಮಾಡಿಲ್ಲ ಎಂದರೆ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಮಾರಾಟ ಮಾಡಿದ ಆಸ್ತಿಗಳಲ್ಲಿ 2 ನೇ ವಾದಿಗೆ ಹಿಸ್ಸೆ ಕೊಟ್ಟಿದ್ದೀರಾ ಎಂದರೆ ಹಿಸ್ಸೆ ಕೊಟ್ಟಿಲ್ಲ, ಸಾಕ್ಷಿ ಮುಂದುವರೆದು ಅವರಿಗೆ ಕೊಡಬೇಕಾಗಿದ್ದನ್ನು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. 2 ನೇ ವಾದಿಗೆ ಹಿಸ್ಸೆ ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

7. ಭೂ ನ್ಯಾಯ ಮಂಡಳಿಗೆ ಸಂಬಂಧಿಸಿದಂತೆ ದಾವಾ ಆಸ್ತಿಯ ದಾಖಲೆಗಳನ್ನು ನೋಡಿದ್ದೇನೆ. 1977 ರಲ್ಲಿ ಭೂ ನ್ಯಾಯ ಮಂಡಳಿಯು ಕೇವಲ 1 ನೇ ಪ್ರತಿವಾದಿಯ ತಂದೆ ಪರವಾಗಿ ಮಾತ್ರ ಜಮೀನು ಮಂಜೂರು ಮಾಡಿ ಆದೇಶ ಮಾಡಿದೆ ಎಂದರೆ ಸರಿಯಲ್ಲ. ಅವರು ಕುಟುಂಬದಲ್ಲಿ ದೊಡ್ಡವರಾಗಿದ್ದ ಕಾರಣ ಅವರ ಹೆಸರಿನಲ್ಲಿ ಮಂಜೂರಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ನಮೂನೆ 7 ರಲ್ಲಿ 1 ನೇ ಪ್ರತಿವಾದಿಯ ತಂದೆ ಕುಟುಂಬದ ಮುಖ್ಯಸ್ಥ ಎಂದು ನಮೂದಿಸಿದ್ದಾರೆಯೇ ಎಂದರೆ ಇಲ್ಲ. ರಿ.ಸ.ನಂ.89/1 ಕ್ಕೆ ಸಂಬಂಧಿಸಿದಂತೆ 1983 ರಲ್ಲಿ ಕೇವಲ 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಮಾತ್ರ ಭೂ ನ್ಯಾಯ ಮಂಡಳಿಯಿಂದ ನಮೂನೆ10 ನ್ನು ವಿತರಿಸಲಾಗಿದೆ

ಎಂದರೆ ಅವರು ಕುಟುಂಬದಲ್ಲಿ ಹಿರಿಯರಾದ ಕಾರಣ ಅವರ ಹೆಸರಿನಲ್ಲಿ ವಿತರಿಸಲಾಗಿದೆ. ಅವರು ಕುಟುಂಬದ ಹಿರಿಯರಾದ ಕಾರಣ ಅವರ ಹೆಸರಿನಲ್ಲಿ ನಮೂನೆ 10 ನ್ನು ನೀಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಒಬ್ಬರೇ ತನ್ನ ಕುಟುಂಬದ ಪರವಾಗಿ ಅದನ್ನು ಸಾಗುವಳಿ ಮಾಡುತ್ತಿದ್ದ ಕಾರಣ ಅವರೊಬ್ಬರ ಹೆಸರಿನಲ್ಲಿ ಮಂಜೂರಾಗಿದೆ ಎಂದರೆ ಸರಿಯಲ್ಲ. 1983 ರಲ್ಲಿ ಡ ನಂ. 465 ಇದು 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಮಂಜೂರಾಗಿದೆ ಎಂದರೆ ಸರಿ. ಸದರಿ ಡ ಸಂಖ್ಯೆ465 ನ್ನು ಇಲ್ಲಿವರೆಗೂ ನಾವು ಪ್ರಶ್ನಿಸಿಲ್ಲ. ಸರ್ವೆ ನಂ. 83 ಕ್ಕೆ ಸಂಬಂಧಿಸಿದಂತೆ ಮಾತ್ರ ಇಬ್ಬರ ಹೆಸರಿನಲ್ಲಿ ಸಾಮೂಹಿಕವಾಗಿ ಮಂಜೂರಾಗಿದೆ ಎಂದರೆ ಸರಿಯಲ್ಲ. ಎಲ್ಲಾ ಜಮೀನುಗಳು ಇಬ್ಬರ ಹೆಸರಿನಲ್ಲಿಯೂ ಮಂಜೂರಾಗಿವೆ. ಸರ್ವೆ ನಂ.83 ರಲ್ಲಿ ನನ್ನ ಹೆಸರಿಗೆ 1 ಎಕರೆ 20 ಗುಂಟೆ ಯಾವ ಇಸವಿಯಲ್ಲಿ ದಾಖಲಾಯಿತು ಎಂದು ನೆನ ಪಿಲ್ಲ. 1987 ರಲ್ಲಿ ಡ ನಂ. 543 ರ ಪ್ರಕಾರ ನನ್ನ ತಾಯಿಗೆ ಬಂದ ಅರ್ಧ ಹಿಸ್ಸೆಯನ್ನು ನನ್ನ ಹೆಸರಿಗೆ ದಾಖಲಿಸಲಾಯಿತು ಎಂದರೆ ಸರಿ. ರಿ.ಸ.ನಂ.83 ನ್ನು 1987 ರಿಂದ ನನ್ನ ಹೆಸರಿಗೆ ದಾಖಲಾಗಿ ಇಲ್ಲಿಯವರೆಗೆ ನಾನೇ ಮಾಲ್ಕಿ ವಹಿವಾಟು ಮಾಡುತ್ತಾ ಬರುತ್ತಿದ್ದೇನೆ ಎಂದರೆ ಸರಿ. ಅದನ್ನು 2016 ರಲ್ಲಿ ನಾನು ಮಾರಾಟ ಮಾಡಿದ್ದೇನೆ ಎಂದರೆ ನಾನು ಮತ್ತು ನನ್ನ ದೊಡ್ಡಪ್ಪನ ಮಕ್ಕಳು ಸೇರಿಯೇ ಮಾರಾಟ ಮಾಡಿದ್ದೇನೆ. ನನ್ನ ದೊಡ್ಡಪ್ಪನ ಮಕ್ಕಳಿಗೆ ಆ ಜಮೀನನ್ನು ಮಾರಾಟ ಮಾಡಲು ಯಾವುದೇ ಹಕ್ಕಿರಲಿಲ್ಲ, ಆದರೂ ಕೂಡ ಅವರೂ ಜೊತೆ ಸೇರಿ ಮಾರಾಟ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1978 ರಲ್ಲಿ ಡ ನಂ. 400 ರ ಪ್ರಕಾರ 1 ನೇ ಪ್ರತಿವಾದಿಯ ತಂದೆಯನ್ನು ರಿ.ಸ.ನಂ. 89/1 ಕ್ಕೆ ಸಂಬಂಧಿಸಿದಂತೆ ಅಧಿಬೋಗದಾರರೆಂದು ಘೋಷಣೆ ಮಾಡಲಾಗಿದೆ ಎಂದರೆ ಅವರು ದೊಡ್ಡವರಾಗಿದ್ದ ಕಾರಣ ಆ ರೀತಿ ಮಾಡಿದ್ದಾರೆ. ಅವರು ದೊಡ್ಡವರಾದ ಕಾರಣ ಆ ರೀತಿ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**8.** ರಿ.ಸ.ನಂ. 83 ನ್ನು ಡ ನಂ. 469 ರ ಪ್ರಕಾ ರನನ್ನ ತಾಯಿ ಮತ್ತು 1 ನೇ ಪ್ರತಿವಾದಿಯ ತಂದೆಯ ಹೆಸರಿಂನಲ್ಲಿ ಜಂಟಿಯಾಗಿ ಕೊಟ್ಟಿದ್ದಾರೆ ಎಂದರೆ ಇಬ್ಬರೂ ಸೇರಿ ಅರ್ಜಿ ಹಾಕಿದ್ದ ಕಾರಣ ಇಬ್ಬರ ಹೆಸರಿಗೆ ಮಂಜೂರಾಗಿದೆ. ಸದರಿ ಸರ್ವೆ ನಂಬರನ್ನು ಜಂಟಿಯಾಗಿ ಸಾಗುವಳಿ ಮಾಡುತ್ತಿದ್ದ ಕಾರಣ ಜಂಟಿ ಹೆಸರಿನಲ್ಲಿ ಮಂಜೂರು

ಮಾಡಿದ್ದಾರೆ ಹಾಗೂ ಉಳಿದ ಎರಡು ಸರ್ವೆ ನಂಬರುಗಳನ್ನು 1 ನೇ ಪ್ರತಿವಾದಿಯ ತಂದೆ ವಯಕ್ತಿಕವಾಗಿ ಸಾಗುಜವಳಿ ಮಾಡುತ್ತಿದ್ದ ಕಾರಣ ಕೇವಲ ಅವರ ಹೆಸರಿನಲ್ಲಿ ಮಂಜೂರು ಮಾಡಲಾಗಿದೆ ಎಂದರೆ ಸರಿಯಲ್ಲ, ಇಬ್ಬರು ಸೇರಿಯೇ ಮಾಡುತ್ತಿದ್ದರು. 1 ನೇ ಪ್ರತಿವಾದಿಯ ತಂದೆಗೆ ಬಂದ ಜಮೀನುಗಳನ್ನು ಅವರ ವಾರಸುದಾರರು ಎಂದರೆ ಪ್ರತಿವಾದಿಯರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಾಯಿಗೆ ಮಂಜೂರಾದ ಜಮೀನುಗಳು ನನ್ನ ಹೆಸರಿಗೆ ಬಂದ ನಂತರ ಅವುಗಳನ್ನು ಮಾರಾಟ ಮಾಡಿ, ಹೇಗಾದರೂ ಪ್ರತಿವಾದಿಯರ ಜಮೀನುಗಳನ್ನು ಕಬಳಿಸಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇನೆ  ಎಂದರೆ ಸರಿಯಲ್ಲ. ನನ್ನ ತಾಯಿಗೆ ಬಂದ ಜಮೀನಿನಲ್ಲಿ 2 ನೇ ವಾದಿಗೆ ಯಾವುದೇ ಹಿಸ್ಸೆಯನ್ನು ಕೊಡದೇ ಆಕೆಯೊಂದಿಗೆ ಮಿಲಾಪಿಯಾಗಿಕೊಂಡು ದಾವಾ ಆಸ್ತಿಯಲ್ಲಿ ಹಿಸ್ಸೆ ಕೋರಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**9.** 2021 ರಲ್ಲಿ ನಾನು 1 ನೇ ಪ್ರತಿವಾದಿಯ ಬಳಿ ಹಿಸ್ಸೆ ಕೇಳಿದೆ. ಅವರು ಹಿಸ್ಸೆ ಕೊಡುವುದಿಲ್ಲ, ನ್ಯಾಯಾಲಯಕ್ಕೆ ಹೋಗಿ ತೆಗೆದುಕೊಳ್ಳುವಂತೆ ಹೇಳಿದರು, ಆದ್ದರಿಂದ ದಾವೆ ಹಾಕಿದ್ದೇನೆ. 1 ನೇ ಪ್ರತಿವಾದಿಯ ಬಳಿ ಹಿಸ್ಸೆ ಕೇಳಿದಾಗ ಆತ ಕೊಡುವುದಿಲ್ಲ ಎಂದು ಹೇಳಿದ ಬಗ್ಗೆ ವಾದಪತ್ರದಲ್ಲಾಗಲೀ, ಸಾಕ್ಷಿ ಶಪಥ ಪತ್ರದಲ್ಲಾಗಲೀ ಬರೆಯಿಸಿದ್ದೀರಾ ಎಂದರೆ ಬರೆಯಿಸಿದ್ದೇನೆ. ದಾವಾ ಶೆಡ್ಯೂಲ್ 2 ಮತ್ತು 3 ನೇ ಜಮೀನುಗಳ ಬಗ್ಗೆ 1973-1974 ನೇ ಸಾಲಿನಿಂದಲೇ 1 ನೇ ಪ್ರತಿವಾದಿಯ ತಂದೆಯೇ ಅಧಿಬೋಗದಾರರೆಂದು ಉತಾರೆಯಲ್ಲಿ ನಮೂದಾಗುತ್ತಾ ಬಂದಿದೆ ಎಂದರೆ ಅವರು ಕುಟುಂಬದಲ್ಲಿ ದೊಡ್ಡವರಾದ ಕಾರಣ ಅವರ ಹೆಸರು ದಾಖಲೆಗಳಲ್ಲಿ ನಮೂದಾಗಿದೆ ಎಂದು ನುಡಿಯುತ್ತಾರೆ. ದಾವಾ ಅಸ್ತಿಗಳು ಪ್ರತಿವಾದಿಯರ ಮೂಲ ಪುರುಷರಾದ ನಿಂಗಪ್ಪರವರಿಗೆ ಬಂದ ಆಸ್ತಿಗಳಾದ ಕಾರಣ ವಾದಿಯರಾದ ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಿಸ್ಸೆಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಮಾರಾಟ  ಮಾಡಿದ ಆಸ್ತಿಗಳಿಂದ ಬಂದ ಉತ್ಪನ್ನದಿಂದ ನನ್ನ ಮತ್ತು ನನ್ನ ಪತ್ನಿಯ ಹೆಸರಿನಲ್ಲಿ ಆಸ್ತಿ ಖರೀದಿಸಿದ್ದರೂ ಸಹ ಉದ್ದೇಶಪೂರ್ವಕವಾಗಿ ಆ ಮೂರು ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನಗೆ ಸಂಬಂಧಪಡದೇ ಇರುವ ಕಾರಣ ಯಾವುದೇ ರೀತಿಯ ಹಿಸ್ಸೆಯ ಹಕ್ಕು ನಮಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿಯ ತಂದೆ ಕಾಲದಿಂದಲೂ ಅವರೇ ಮಾಲ್ಲಿ ನಾತೆಯಿಂದ ಸಾಗುಜವಳಿ

ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನಾನು ಯಾವತ್ತೂ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ದಾವಾ ಆಸ್ತಿಗಳನ್ನು ಸಾಗುವಳಿ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಯರು ಮಾತ್ರ ನೀರಿನ ಕೊಳವೆಯನ್ನು ತೆಗೆಸಿ ಅಡಿಕೆ ತೋಟ ಮಾಡಿ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಘರಾಣೆಗೆ ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇಲ್ಲ ಎಂದರೆ ಸರಿ. ಪ್ರತಿವಾದಿಯರು ದಾವಾ ಆಸ್ತಿಗಳಲ್ಲಿ 10 ಗುಂಟೆ, 15 ಗುಂಟೆಯಂತೆ ವಿಭಾಗ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಅವರ ತಂದೆಗೆ ಬಂದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ. ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ತಂದೆಗೆ ಬಂದಿರುವ ಕಾರಣ ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ಕಾರಣಕ್ಕಾಗಿ ನಾನು ಮತ್ತು ನನ್ನ ತಂಗಿ ಸೇರಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿದ್ದಾರೆ.

**Sd/-**
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್